



# ಮರದ ತುಂಬ ವ್ಯಕ್ತಿ ಬಿಂಬ!

ಕಾಂಬೋಡಿಯಾದ ಜನರಿಗೆ ಆಧ್ಯಾತ್ಮದಲ್ಲಿ ನಂಬಿಕೆ ಹೆಚ್ಚು. ಇಲ್ಲಿನ ಸಂಸ್ಕೃತಿ ಕೂಡ ಆಳವಾಗಿ ಬೇರು ಬಿಟ್ಟಿರುವುದು ಆಧ್ಯಾತ್ಮದಲ್ಲಿ. ಹೀಗಾಗಿ ಇಲ್ಲಿನ ಮರಗಳಲ್ಲಿ ಕೂಡ ಅದು ಪ್ರತಿಬಿಂಬಿತವಾಗಿದೆ. 2009ರಲ್ಲಿ ಇಲ್ಲಿನ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರೊಬ್ಬರು ಮರದ ಮೇಲೆ ಆಧ್ಯಾತ್ಮ ಚಿಂತಕರ ಪ್ರತಿಬಿಂಬವನ್ನು ಸೃಷ್ಟಿಸುವ ಪರಿಕಲ್ಪನೆಯನ್ನು ಬೆಳಕಿಗೆ ತಂದರು. ಅಚ್ಚರಿಯ ಸಂಗತಿಯೆಂದರೆ ಇದು 'ಫ್ಯಾಂಟಸಿ ಕ್ರಿಯೇಷನ್ಸ್' ಆಗಿದ್ದು ರಾತ್ರಿಯ ಕತ್ತಲೆಯಲ್ಲಿ ವಿದ್ಯುತ್‌ದೀಪಗಳನ್ನು ಮರದ ಮೇಲೆ ಹಾಯಿಸಿದಾಗ ಮಾತ್ರ ವ್ಯಕ್ತಿಯ ಪ್ರತಿಬಿಂಬ ಕಾಣುವುದು, ಅದೂ ಸಹ ನಿಜವಾದ ವ್ಯಕ್ತಿಯಂತೆಯೇ.

ಈ ಅತ್ಯಾಧುನಿಕ ತಂತ್ರಜ್ಞಾನವನ್ನು ಫೋಟೊಗ್ರಫಿ ಮೂಲಕವೇ ರೂಪಿಸಿದ ಕ್ಲೆಮೆಂಟ್ ಬ್ರೈಂಡ್ ಎಂಬ ಪ್ರಾಧ್ಯಾಪಕ, 'ಇದರಲ್ಲಿ ನೆರಳು–ಬೆಳಕಿನ ತಂತ್ರಜ್ಞಾನವಿದೆ. ತುಂಬಿದ ರೆಂಬೆ, ಕೊಂಬೆ, ಎಲೆಗಳಿಂದ ಕೂಡಿ ಎತ್ತರೆತ್ತರ ಬೆಳೆದ ಮರಗಳ ಮೇಲೆ ಚಿಂತಕರ ಚಿತ್ತಾರವನ್ನು ಪಡಿಮೂಡಿಸುವಂಥ ಫೋಟೊ ತೆಗೆದುಕೊಂಡು ಈ ಅಚ್ಚರಿಯ ಪ್ರತಿಬಿಂಬ ಚಿತ್ರಣವನ್ನು ತಯಾರುಗೊಳಿಸಿದೆ' ಎನ್ನುತ್ತಾರೆ.

ಇದು ಕಲಾತ್ಮಕವೂ ಆಗಿದ್ದು, ನೈಜತೆಗೆ ತೀರಾ ಹತ್ತಿರವಾಗಿದೆ. ನೋಡುಗರಿಗೆ ಈ ತಂತ್ರಜ್ಞಾನದ ಅರಿವು ಕೂಡ ಆಗದಂತೆ ಅತ್ಯಂತ ಸಹಜವೇ ಎಂಬಂತೆ ರೂಪಿಸಲಾಗಿದೆ. ಪರಿಸರ ಜಾಗೃತಿಯನ್ನು ಆಧ್ಯಾತ್ಮದ ಮೂಲಕ ಸಾಕಾರಗೊಳಿಸುವ ಪ್ರಯತ್ನ ಇದಾಗಿದೆ ಎಂಬುದು ಕ್ಲೆಮೆಂಟ್ ಅವರ ಅಭಿಮತ.

■ ಯು. ಅನಂತ್

